ಅ) ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಉಳ್ಳಾಲದಿಂದ ಗಂಗೊಳ್ಳಿಯವರೆಗೆ ಆನೆಕಾಲು ರೋಗ ಆರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೋಗಕ್ಕೆ ತುತ್ತಾಗಿರುವವರ ಸಂಖ್ಯೆ ಹಾಗೂ ಎಲ್ಲೆಲ್ಲಿ?

ಇ) ಆನೆಕಾಲು ರೋಗದ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕಾರ್ಯಕ್ರಮಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು):–

ಅ) ಹೌದು.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೋಗಕ್ಕೆ ಆಗಾಗ್ಗೆ ಕೈಕೊಂಡ ಸಮೀಕ್ಷೆಯಿಂದ ಈ ರೋಗವು ಮಂಗಳೂರು, ಉಡುಪಿ, ಬಂಟ್ವಾಳ, ಕುಂದಾಪುರ, ಕಾರ್ಕಳ ಮತ್ತು ಪುತ್ತೂರು ತಾಲ್ಲೂಕುಗಳಲ್ಲಿ ಇರುವುದು ಕಂಡು ಬಂದಿರುತ್ತದೆ. ಈ ರೋಗಕ್ಕೆ ತುತ್ತಾಗಿರುವ ಜನಸಂಖ್ಯೆಯ ಶೇಕಡಾವಾರು ಪ್ರಮಾಣ ಈ ಕೆಳಕಂಡ ಪಟ್ಟಣಗಳಿಗೆ ಈ ರೀತಿ ಇರುತ್ತದೆ.

1)	ಮಂಗಳೂರು	2.0
2)	ಉಳ್ಳಾಲ	9.2
3)	ಉಡುಪಿ	2.2
4)	ಬಂಟ್ವಾಳ	4.7
5)	ಕಾರ್ಕಳ	2.6
6)	ಮುಲ್ಕಿ	3.2
7)	ಬ್ರಹ್ಮಾವರ	2.7
8)	ಪುತ್ತೂರು	3.4
9)	ಬಜ್ಪೆ	5.0
10)	ಗಂಗೊಳ್ಳಿ	4.9

ಇ) ಆನೆಕಾಲು ರೋಗದ ಹತೋಟಿಗೆ ರಾಷ್ಟ್ರೀಯ ಕಾರ್ಯಕ್ರಮದಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ನಿಯಂತ್ರಣ ಘಟಕಗಳನ್ನು ಮತ್ತು ಎರಡು ರಾತ್ರಿ ಚಿಕಿತ್ಸಾಲಯಗಳನ್ನು ಮಂಗಳೂರು ಮತ್ತು ಉಡುಪಿ ಪಟ್ಟಣಗಳಲ್ಲಿ ಸ್ಥಾಪಿಸಲಾಗಿದ್ದು ನಿಯಂತ್ರಣ ಘಟಕಗಳು ಮುಖ್ಯವಾಗಿ ಈ ರೋಗ ಹರಡುವ ಸೊಳ್ಳೆಗಳ ನಿಯಂತ್ರಣ ಕಾರ್ಯವನ್ನು ನಗರ ಸಭೆಗಳ ಮುಖಾಂತರ ಕೈಗೊಳ್ಳುತ್ತವೆ. ರಾತ್ರಿ ಚಿಕಿತ್ಸಾಲಯಗಳು ಜನ ಸಮುದಾಯದಲ್ಲಿ ಈ ರೋಗವನ್ನು ಪತ್ತೆ ಹಚ್ಚುವ ಕಾರ್ಯವನ್ನು ಕೈಗೊಂಡು, ಕಂಡು ಬಂದ ರೋಗದ ಪ್ರಕರಣಗಳಿಗೆ ಡೈ ಇಥೈಲ್ ಕಾರ್ಬಾಮಜೈನ್ ಮಾತ್ರೆಗಳಿಂದ ಸೂಕ್ತ ಚಿಕಿತ್ಸೆಯನ್ನು ನೀಡುತ್ತಿವೆ ಮತ್ತು ಈ ಜಿಲ್ಲೆಯಲ್ಲಿ ಮತ್ತೆ ಇನ್ನೆರಡು ರಾತ್ರಿ ಚಿಕಿತ್ಸಾಲಯಗಳನ್ನು ಉಳ್ಳಾಲ ಮತ್ತು ಗಂಗೊಳ್ಳಿಯಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ನ್ಯಾಯಬೆಲೆ ಅಂಗಡಿಗಳ ಮಂಜೂರಾತಿ ಬಗ್ಗೆ

546. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಟಿ. ದಾಸರಹಳ್ಳಿಗೆ ದಿ. 01–01–1990ರಿಂದ ಈಚೆಗೆ ನ್ಯಾಯಬೆಲೆ ಅಂಗಡಿಯನ್ನು ಮಂಜೂರು ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ, ನ್ಯಾಯಬೆಲೆ ಅಂಗಡಿಗೆ ಅರ್ಜಿ ಸಲ್ಲಿಸಿದ್ದವರ ಸಂಖ್ಯೆ ಎಷ್ಟು?

ಇ) ಸ್ಥಳೀಯರಿಗೆ ಆದ್ಯತೆ ನೀಡದೆ ಹೊರಗಿನವರಿಗೆ ಮಂಜೂರು ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ, ಸ್ಥಳೀಯವರಿಗೆ ಎಷ್ಟು ಜನರಿಗೆ ಕೊಡಲಾಗಿದೆ ಹಾಗೂ ಹೊರಗಿನವರಿಗೆ ಎಷ್ಟು ಜನಕ್ಕೆ ಕೊಡಲಾಗಿದೆ?

ಉ) ಹೊರಗಿನವರಿಗೆ ಕೊಟ್ಟಿರುವ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) 4 (ನಾಲ್ಕು) ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ.

ಆ) 17 ಜನ.

ಇ) ಹೌದು.

ಈ) 3 ಜನ ಸ್ಥಳೀಯರು, 1 ಬೆಂಗಳೂರು.

ಉ) ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ವೆನ್‌ಲಾಕ್ ಸರ್ಕಾರಿ ಆಸ್ಪತ್ರೆಯಲ್ಲಿ ಖಾಲಿ ಇರುವ "ಡಿ" ವರ್ಗದ ಸಿಬ್ಬಂದಿ ಬಗ್ಗೆ

349. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ವೆನ್‌ಲಾಕ್ ಆಸ್ಪತ್ರೆ ಮಂಗಳೂರು ಇಲ್ಲಿ ಎಷ್ಟು ಗ್ರೂಪ್–ಡಿ ನೌಕರರು ಕೆಲಸ ಮಾಡುತ್ತಿದ್ದಾರೆ?

ಆ) ಈ ಆಸ್ಪತ್ರೆಯಲ್ಲಿ ಎಷ್ಟು ಗ್ರೂಪ್–ಡಿ ಹುದ್ದೆ ಖಾಲಿ ಇರುತ್ತದೆ ಮತ್ತು ಯಾವ ದಿನಾಂಕದಿಂದ ಭರ್ತಿ ಮಾಡಿಲ್ಲ?

ಇ) ಯಾವಾಗ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು):–

ಅ) 236.

ಆ) 34 ಹುದ್ದೆಗಳು ಖಾಲಿ ಇರುತ್ತವೆ. 3 ವರ್ಷಗಳಿಂದ ಭರ್ತಿ ಮಾಡಿರುವುದಿಲ್ಲ.

ಇ) ಸರ್ಕಾರ ಮಿತವ್ಯಯ ಆದೇಶ ಸಡಿಲಿಸಿದ ನಂತರ ಹುದ್ದೆಗಳನ್ನು ತುಂಬಲಾಗುವುದು.

ಬಂಕಾಪುರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆ ಏರಿಸುವ ಬಗ್ಗೆ.

557. ಶ್ರೀ ಮಂಜುನಾಥ್. ಸಿ. ಕುನ್ನೂರ್ (ಶಿಗ್ಗಾಂವ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರದಲ್ಲಿರುವ ಪಿ.ಹೆಚ್.ಸಿ (ಪ್ರಾಥಮಿಕ ಆರೋಗ್ಯ ಕೇಂದ್ರ)ವನ್ನು 6 ಹಾಸಿಗೆಗಳಿಂದ 30 ಹಾಸಿಗೆಗಳವರೆಗೆ ಮೇಲ್ದರ್ಜೆಗೆ ಏರಿಸಲು ಸರ್ಕಾರದ ಉದ್ದೇಶವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಸದರಿ ದವಾಖಾನೆಯನ್ನು ಮೇಲ್ದರ್ಜೆಗೇರಿಸಲಾಗುವುದು?